ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ,
ಹೆಚ್.ಡಿ.ಕೋಟೆ

ಸಿ.ಸಿ. ನಂ. **41/2022**

ಸಾಕ್ಷಿಗೆ ದಿನಾಂಕ **31.1.2023** ರಂದು ಪ್ರಮಾಣವಚನ ಬೋಧಿಸಲಾಯಿತು.

| | | | |
|---|---|---|---|
| ಸಾಕ್ಷಿದಾರರ ಹೆಸರು | : | ನಾಗೇಂದ್ರ | ಪಿ.ಡಬ್ಲ್ಯೂ-2 |
| ತಂದೆಯ/ಗಂಡನ ಹೆಸರು | : | ಚಿಕ್ಕರಂಗಶೆಟ್ಟಿ | ಸಿ.ಡಬ್ಲ್ಯೂ-3 |
| ವಯಸ್ಸು | : | 50 | |
| ಉದ್ಯೋಗ | : | ಬಾರ್ಬರ್ ವೃತ್ತಿ | |
| ವಾಸಸ್ಥಳ | : | ಜಿನ್ನಹಳ್ಳಿ | |

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ಸುಮಾರು 1 ವರ್ಷದ ಹಿಂದೆ ಸಂಜೆ 6.30-7 ರಲ್ಲಿ ನಾನು ಹೊಮ್ಮರಗಳ್ಳಿಯ ಮಹದೇವಸ್ವಾಮಿ ರವರ ಪ್ರಾವಿಷನ್ ಸ್ಟೋರ್ ಬಳಿ ನಿಂತಿದ್ದಾಗ, ಮೃತ ಪರಮೇಶ್ವರ ರವರು ಮಹದೇವಸ್ವಾಮಿ ರವರ ಪ್ರಾವಿಷನ್ ಸ್ಟೋರ್‌ಗೆ ಬರಲು ರಸ್ತೆ ದಾಟುತ್ತಿದ್ದರು. ಆಗ ಮೈಸೂರು ಕಡೆಯಿಂದ ಒಂದು ದ್ವಿಚಕ್ರ ವಾಹನ ಸಾಧಾರಣಾ ವೇಗದಲ್ಲಿ ಬಂದು ಸದರಿ ಪರಮೇಶ್ವರ ರವರಿಗೆ ಡಿಕ್ಕಿಪಡಿಸಿರುತ್ತದೆ. ಆಗ ಅವರು ರಸ್ತೆ ಮೇಲೆ ಬಿದ್ದು ತಲೆಗೆ ಪೆಟ್ಟಾಗಿರುತ್ತದೆ. ಸದರಿ ಅಪಘಾತ ಸ್ಥಳದಲ್ಲಿ ಪರಮೇಶ್ವರ ಮನೆ ಇರುತ್ತದೆ. ಅವರ ಮನೆಯವರು ಸ್ಥಳಕ್ಕೆ ಬಂದು ಆತನನ್ನು ಅಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿರುತ್ತಾರೆ. ಆತ 12 ದಿನಗಳ ನಂತರ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾನೆ. ಸದರಿ ಅಪಘಾತಪಡಿಸಿದ ವಾಹನದ ಸಂಖ್ಯೆ ನನಗೆ ಗೊತ್ತಿರುವುದಿಲ್ಲ, ಆದರೆ ಅದರ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ, ಆತ ಈ ದಿನ ನ್ಯಾಯಾಲಯದ ಮುಂದಿರುತ್ತಾನೆ. ಸದರಿ ಅಪಘಾತಪಡಿಸಿದ ವಾಹನದ ಭಾವಚಿತ್ರವನ್ನು ನೋಡಿದರೆ ಗುರುತಿಸಲಾಗುವುದಿಲ್ಲ. ಅಪಘಾತವಾದ 2 ದಿನಗಳ ನಂತರ ಪೋಲಿಸರು ಪಂಚನಾಮೆ ಜರುಗಿಸಿರುತ್ತಾರೆ. ಅದಕ್ಕೆ ನಾನು ಮತ್ತು ಚಾಸ2 ರವರು ಸಾಕ್ಷಿಯಾಗಿ ಸಹಿ ಮಾಡಿರುತ್ತೇವೆ. ಅಪಘಾತಪಡಿಸಿದ ದ್ವಿಚಕ್ರ ವಾಹನ ಏನಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ, ಪೋಲಿಸರು ಅದನ್ನು ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಸಾಕ್ಷಿ ಸ್ಥಳ ಪಂಚನಾಮೆಯಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ3 ಎಂದು, ಸಾಕ್ಷಿ ಸಹಿಯನ್ನು ನಿಪಿ3 ಎ ಎಂದು ಗುರುತಿಸಲಾಯಿತು.

(ಎಪಿಪಿಯವರು ಸಾಕ್ಷಿಯನ್ನು ಭಾಗಾಂಶ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)

ಪಾಟೀಸವಾಲುಃಎಪಿಪಿ ರವರಿಂದಃ

ಈ ಕೇಸಿನ ಆರೋಪಿ ತನಗೆ ಸೇರಿದ ಕೆಎ 09 ಹೆಚ್ಎಕ್ಸ 2848 ಹೀರೋಹೊಂಡ ಬೈಕನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಿಸಿಕೊಂಡು ಬಂದು ಪರಮೇಶ್ವರ ರವರು ಚಾಸ 2 ರವರ ಅಂಗಡಿಯಿಂದ ಸಾಮಾನು ತೆಗೆದುಕೊಂಡು ಮನೆ ಕಡೆಗೆ ನಡೆದುಕೊಂಡು ಹೋಗುತ್ತಿದ್ದಾಗ ಅವರಿಗೆ ಡಿಕ್ಕಿಪಡಿಸಿರುತ್ತಾನೆ ಎಂದು ಈಗ ಓದಿ ಕೇಳಿಸಿಕೊಂಡು ನಿಪಿ4 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿನಾಂಕ 8.2.222 ರಂದು ಪೋಲಿಸರು ನನ್ನ, ಚಾಸ 2 ಮತ್ತು ಚಾಸ 4 ರವರ ಸಮಕ್ಷಮ ಈಗ ಓದಿ ಕೇಳಿಸಿಕೊಂಡ ನಿಪಿ3 ರಂತೆ ಪಂಚನಾಮೆ ಜರುಗಿಸಿ ಅಪಘಾತಪಡಿಸಿದ ಕೆಎ 09 ಹೆಚ್ಎಕ್ಸ 2848 ಹೀರೋಹೊಂಡ ಬೈಕನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ

ನಾನು ಕ್ಷೌರ ಕೆಲಸ ಮಾಡುತ್ತೇನೆ. ನನ್ನ ಅಂಗಡಿ ಮೆಡಿಕಲ್ ಸ್ಟೋರ್ ಎದುರುಗಡೆ ಇರುತ್ತದೆ. ನಾನು ಮೃತ ಪರಮೇಶ್ವರ ರವರ ಪಕ್ಕದ ಮನೆಯನ್ನು ಬಾಡಿಗೆಗೆ ಪಡೆದುಕೊಂಡು ವಾಸ ಮಾಡುತ್ತೇನೆ ಎಂದರೆ ಸರಿ. ನಾನು ಬೆಳಿಗ್ಗೆ 7 ರಿಂದ ರಾತ್ರಿ 8.30 ರವರೆಗೆ ಅಂಗಡಿಯಲ್ಲಿ ಕೆಲಸ ಮಾಡುತ್ತೇನೆ. ಅಪಘಾತ ಸಮಯದಲ್ಲಿ ನಾನು ನನ್ನ ಅಂಗಡಿಯ ಹೊರಗಡೆ ನಿಂತಿದ್ದೆ. ಅಪಘಾತ ಶಬ್ದ ಕೇಳಿದ ನಂತರ ನಾನು ಸ್ಥಳಕ್ಕೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ಸ್ಥಳದಲ್ಲಿ ಸಾಕಷ್ಟು ಅಂಗಡಿಗಳು ಇದೆ ಮತ್ತು ಸಾಕಷ್ಟು ಜನರು ಇದ್ದರು ಎಂದರೆ ಸರಿ. ಅಪಘಾತ ಮಣ್ಣು ರಸ್ತೆಯಲ್ಲಿ ಆಗಿರುತ್ತದೆ. ಅಪಘಾತ ಸ್ಥಳದಲ್ಲಿ ಪೋಲಿಸರು ನನ್ನ ಸಮಕ್ಷಮ ಯಾವುದೇ ನಕಾಶೆಯನ್ನು ತಯಾರು ಮಾಡಿರುವುದಿಲ್ಲ. ನಿಪಿ3 ರಲ್ಲಿ ಪೋಲಿಸರು ಅಪಘಾತ ಸ್ಥಳ ಎಲ್ಲಿ ಎಂದು ಬರೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

ಪಂಚರಾಗಿ ಬರಲು ಪೋಲಿಸರು ನನಗೆ ನೋಟಿಸ್ ಜಾರಿ ಮಾಡಿರುವುದಿಲ್ಲ. ಅಪಘಾತ ಸಂಬಂಧ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ. ನಾನು ಚಾಸ 2 ರವರ ಅಂಗಡಿ ಕಡೆಗೆ ಮುಖ ಮಾಡಿ ನಿಂತಿದ್ದೆ. ಆ ದಿನ ಆರೋಪಿ ಹೆಲ್ಮೆಟ್ ಧರಿಸಿರುವ ಬಗ್ಗೆ ನಾನು ನೋಡಿರುವುದಿಲ್ಲ. ನಾನು ಆರೋಪಿಯನ್ನು ಆ ಸಮಯದಲ್ಲಿ ನೋಡಿರುವುದಿಲ್ಲ. ನಾನು ಯಾವುದೇ ಅಪಘಾತವನ್ನು ಕಣ್ಣಾರೆ ಕಂಡಿರುವುದಿಲ್ಲ, ಚಾಸ 1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ